ಹೋದ ಉಸಿರು ಬಂದಂತಾಯಿತು.

ಆಟೊದಲ್ಲಿ ಕೂತು ಅದು ಹೊರಟ ಮೇಲೆಯೇ ಅವಳು ಡ್ರೈವರ್‌ನನ್ನು ಸರಿಯಾಗಿ ಗಮನಿಸಿದ್ದು. ಸುಮಾರು ಐವತ್ತು ವರ್ಷ ದಾಟಿದ, ಕೂತಿದ್ದರೂ ಎತ್ತರವಾಗಿಯೇ ಇರುವ ವ್ಯಕ್ತಿ. ಸಿಡುಬಿನ ಕಲೆ ಇರುವ ಕಪ್ಪು ಮುಖ. ಖಾಕಿ ದಿರುಸು. ‘ಒಂದು ಗಂಟೆಯಿಂದ ಆಟೊಗಾಗಿ ಕಾಯುತ್ತಿದ್ದೆ. ಸುಮಾರು ಒಂದು ಮೈಲಿ ನಡೆದೇ ಬಂದೆ. ದೇವರಂತೆ ಸಿಕ್ಕಿದಿರಿ. ನನಗೆ ಏಳು ಗಂಟೆಗೆಲ್ಲ ಮನೆಯ ಹತ್ತಿರ ಇರಬೇಕಿತ್ತು. ಡೇ ಕೇರ್‌ನಿಂದ ಮಗಳನ್ನು ಎತ್ತಿಕೊಳ್ಳಬೇಕಾಗಿದೆ’ ಎಂದಳು. ಅವನು ಮಾತಾಡಲಿಲ್ಲ.

‘ರಿಂಗ್ ರೋಡ್ ಆಚೆ ಯಾರೋ ಒಬ್ಬ ಗೋಡೆ ಕುಸಿದು ಮಣ್ಣಲ್ಲಿ ಸಿಕ್ಕಿಹಾಕಿಕೊಂಡಿದ್ದಾನಂತೆ. ಅದಕ್ಕೇ ಜೆಸಿಬಿ, ಫಯರ್ ಎಂಜಿನ್ ಎಲ್ಲಾ ಅವನನ್ನು ಎತ್ತಲು ಪ್ರಯತ್ನಿಸುತ್ತಿವೆ. ಅದಕ್ಕೇ ಟ್ರಾಫಿಕ್ ಜಾಮ್. ಏನಾಯ್ತೋ?’ ಎಂದಳವಳು. ಅದಕ್ಕೂ ಅವನು ಮಾತಾಡಲಿಲ್ಲ. ಆಟೊ ಓಡಿಸುವುದರಲ್ಲಿಯೇ ಮಗ್ನನಾಗಿದ್ದ.

ಶಾಪಿಂಗ್ ಕಾಂಪ್ಲೆಕ್ಸ್ ದಾಟಿ, ಥರ್ಡ್ ಬ್ಲಾಕ್ ಮೂಲಕ ಪಟಾಳಮ್ಮ ಗುಡಿ ರಸ್ತೆ ಹಾದು, ಕೃಷ್ಣರಾವ್ ಪಾರ್ಕಿಗೆ ಸುತ್ತು ಹಾಕಿ, ಗಾಂಧಿಬಜಾರ್ ಹಿಂದಕ್ಕೆ ಬಿಟ್ಟು ಆಶ್ರಮದ ಹತ್ತಿರ ಬರುವಾಗ ರಾತ್ರಿಯ ಎಂಟೂ ಇಪ್ಪತ್ತು!

